338 (652) ಶ್ರೀ ದಿನೇಶ್ ಗುಂಡೂರಾವ್, (ಗಾಂಧಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿ ಯೋಜನೆ (ಸಿ ಡಿ ಪಿ) ಕರಡನ್ನು ಸಿದ್ದವಡಿಸಲಾಗಿರುವುದು ನಿಜವೆ,

ಆ) ಹಾಗಿದ್ದಲ್ಲಿ ಯಾವಾಗ ಸಿದ್ದವಡಿಸಲಾಗಿದೆ,

ಇ) ಇಲ್ಲಿಯವರೆಗೂ ಈ ಸಿ ಡಿ ಪಿ, ಯನ್ನು ಅಧಿಕೃತವಾಗಿ ಬಿಡುಗಡೆಗೊಳಿಸದಿರಲು ಕಾರಣಗಳೇನು,

ಈ) ಸಿ ಡಿ ಪಿ ಯನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಹೌದು

ಆ) ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಕರಡು ಮಾಸ್ಟರ್ ಪ್ಲಾನ್ 2015ಕ್ಕೆ ಸರ್ಕಾರ ದಿನಾಂಕ 10–6–2005 ರಂದು ಅನುಮೋದನೆ ನೀಡಿದ್ದು, ದಿನಾಂಕ 17–6–2006ರ ರಾಜ್ಯ ಪತ್ರದಲ್ಲಿ ಪ್ರಕಟಿಸಿದೆ

ಇಈ) ಈ ಕರಡು ಮಾಸ್ಟರ್ ಪ್ಲಾನ್ ಕುರಿತಂತೆ ಸ್ವೀಕರಿಸಲಾದ ಆಕ್ಷೇಪಣೆ ಮತ್ತು ಸಲಹೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪರಿಶೀಲಿಸಿದ್ದು ಅಂತಿಮ ಮಾಸ್ಟರ್ ಪ್ಲಾನ್ 2015ಕ್ಕೆ ಪ್ರಾಧಿಕಾರ ದಿನಾಂಕ 22–12–2006 ರಂದು ಅನುಮೋದನೆ ನೀಡಿ ತನ್ನ ಶಿಫಾರಸ್ಸುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ, ಸೆಕ್ಷನ್ 81(ಸಿ) ರನ್ವಯ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮೂಲಕ ಸರ್ಕಾರಕ್ಕೆ ನಲ್ಲಿಸಿದ್ದು, ನದರಿ ಮಾಸ್ಟರ್ ಪ್ಲಾನ್‌ನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ನಿರೀಕ್ಷಿಸಲಾಗುತ್ತಿದೆ ಅದನ್ನು ಸ್ವೀಕರಿಸಿದ ನಂತರ ಸರ್ಕಾರ ಅಂತಿಮ ನಿರ್ಣಯ ತೆಗೆದುಕೊಳ್ಳುವುದು